6.	ಟಿಎಸ್‌ಪಿ	20.73	1.46	1.42	8.27
7.	ನಬಾರ್ಡ್-16	87.60	3.39	0	0
	ಒಟ್ಟು	1135.51	100.46	81.04	461.18
8.	3054- ರಾ,ಹೆ ಮತ್ತು ಜಿಮುರ ನಿರ್ವಹಣೆ	193.48	311.16	150.00	0.00

ಲೋಕೋಪಯೋಗಿ ವ್ಯಾಪ್ತಿಯಲ್ಲಿ ರಸ್ತೆಗಳ ಸುಧಾರಣೆಗಳು

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೆಬಿಹಾಳ) :-

247(460) ಮಾನ್ಯ ಲೋಕೋಪಯೋಗಿ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

(ಅ) ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿ ಕಾಣದೆ ರಸ್ತೆಗಳು ತುಂಬಾ ಹದಗೆಟ್ಟಿರುವುದರಿಂದ ರೈತರ ಚಕ್ಕಡಿಗಳಿಗೆ ಖಾಸಗಿ : ಸರ್ಕಾರಿ ವಾಹನಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ನೀಡಲಾಗಿದೆ.

(ಈ) ಹಾಗಿದ್ದಲ್ಲಿ, ಸದರಿ ರಸ್ತೆ, ದುರಸ್ತಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೊಪಯೋಗಿ ಸಚಿವರು) :-

(ಅ) ಬಂದಿದೆ.

(ಆ) ಬಂದಿದೆ.

(ಇ) 2011-12ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ರೂ. 44.99 ಲಕ್ಷ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗಾಗಿ ರೂ. 166.85 ಲಕ್ಷ ಅನುದಾನ ನೀಡಿದೆ.

(ಈ) ಮುದ್ದೇಬಿಹಾಳ ಮತ ಕ್ಷೇತ್ರದಲ್ಲಿ ಬರುವ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿಗಳನ್ನು ತುಂಬಿ ನಿರ್ವಹಣೆ ಮಾಡುವ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು; ವಿವರಗಳು ಕೆಳಕಂಡಂತಿದೆ:-

ರಸ್ತೆ	ಒಟ್ಟು ಉದ್ದ (ಕಿ.ಮೀ)	ಗುಂಡಿ ತುಂಬಲು ಪರಿಗಣಿಸಿ ಉದ್ದ (ಕಿ.ಮೀ.)	ಈವರೆಗೆ ಗುಂಡಿ ತುಂಬಿ ನಿರ್ವಹಿಸಿದ (ಉದ್ದ) (ಕಿ.ಮೀ.)
ಜಿಲ್ಲಾ ಮುಖ್ಯ ರಸ್ತೆ	341.73	207.06	99.00
ರಾಜ್ಯ ಹೆದ್ದಾರಿ	138.55	104.10	51.00
ಒಟ್ಟು	480.28	311.16	150.00

ಸಕ್ಕರೆ ಕಾರ್ಖಾನೆಗಳು

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೆಬಿಹಾಳ) :–

248(577) ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಹಾಗಿದ್ದಲ್ಲಿ, ಯಾವ ಸ್ಥಳಗಳಲ್ಲಿ ತೆರೆಯಲು ಉದ್ದೇಶಿಸಿದೆ? ವಿವರವಾದ ಮಾಹಿತಿಯನ್ನು ಒದಗಿಸುವುದು ;

(ಆ) ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಇರುವ ಮಾರ್ಗಸೂಚಿಗಳ್ಯಾವುವು?

(ಇ) ಬಿಜಾಪುರ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಸರ್ಕಾರ ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದೆಯೇ (ವಿವರ ನೀಡುವುದು) ?

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :–

(ಅ) ಈ ಕೆಳಕಂಡ 29 ಹೊಸ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದಿಂದ ಐ.ಇ.ಎಂ. ಪಡೆದು ರೂ. 1–00 ಕೋಟಿ ಮೊತ್ತಕ್ಕೆ Performance Bank Guarantee ನೀಡಿ ಕಾರ್ಖಾನೆ ತೆರೆಯಲು ಉದ್ದೇಶಿಸಿರುತ್ತದೆ.